**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ. 10/2025**

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರದೀಪ್ ಕೆ.ಎಂ | ಸಿ.ಡಬ್ಲ್ಯೂ 3 ಪಿ.ಡಬ್ಲ್ಯೂ 3 |
| ತಂದೆಯ ಹೆಸರು | ಮಂಜಪ್ಪ | |
| ವಯಸ್ಸು | 48 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಕಣಚೂರು ಗ್ರಾಮ, ಮೂಡಿಗೆರೆ ತಾಃ | |

ದಿನಾಂಕಃ 05.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.1, 2, 4 ಮತ್ತು 5 ರವರ ಪರಿಚಯ ನನಗೆ ಇದೆ. ದಿಃ 08.10.2024 ರಂದು ದುರ್ಗಾ ದೇವಸ್ಥಾನದ ಪೂಜೆ ಇತ್ತು. ರಾತ್ರಿ 8.15 ರ ಸುಮಾರಿಗೆ ಪೂಜೆ ಮುಗಿಸಿಕೊಂಡು ನಾನು, ಚಾಸಾ.2, ಚಾಸಾ.4 ಮತ್ತು ಚಾಸಾ.5 ನಡೆದುಕೊಂಡು ಬರುತ್ತಿದ್ದೆವು. ನಮ್ಮ ಮುಂದೆ ಆರೋಪಿ ಹೋಗುತ್ತಿದ್ದ. ಕಲ್ಲಿನಿಂದ ಹೊಡೆದ ಶಬ್ದ ನಮಗೆ ಕೇಳಿತು. ಪ್ರಸಾದ ನೀಡುತ್ತಿರುವುದರಿಂದ ಆ ಸಮಯದಲ್ಲಿ ಆ ವಿಚಾರವನ್ನು ಯಾರಿಗೂ ತಿಳಿಸಲಿಲ್ಲ. ಉಮೇಶ್ ರವರ ಮನೆಯ ಬಳಿ ಮಾರುತಿ 800 ಕಾರು ಸಂಖ್ಯೆ ಕೆ.ಎ.05/3929 ಆಗಿತ್ತು, ಆ ಕಾರಿನ ಮೇಲೆ ಕಲ್ಲು ಇತ್ತು. ಆ ಕಲ್ಲು ಕಾಡು ಕಲ್ಲು ಆಗಿತ್ತು. ಚಾಸಾ.1 ರವರು ಬಂದು ಕಲ್ಲನ್ನು ತೋರಿಸಿದರು, ನಂತರ ಪೊಲೀಸರಿಗೆ ಕರೆ ಮಾಡಿದರು. ಕಾರಿನ ಗಾಜು ಹೊಡೆದಿತ್ತು. ನಾವು ವಿಚಾರಿಸಿದಾಗ ಚಾಸಾ.1 ರವರು ಗಣಪತಿ ಹಬ್ಬದಲ್ಲಿ ಆರೋಪಿ ಕುಡಿದುಕೊಂಡು ಬಂದಿದ್ದ, ಆತನಿಗೆ ಬುದ್ದಿ ಹೇಳಿದ್ದರಿಂದ ಆತ ಕಾರಿನ ಗಾಜನ್ನು ಹೊಡೆದಿದ್ದಾನೆ ಎಂದು ನಮಗೆ ತಿಳಿಸಿದ್ದರು.

2. ನಂತರ ಪೊಲೀಸರು ದಿಃ 15 ರಂದು ಮಧ್ಯಾಹ್ನ 2.00 ಗಂಟೆಗೆ ಸ್ಥಳಕ್ಕೆ

ಬಂದಿದ್ದರು. ಚಾಸಾ.1 ರವರು ತನಗೆ ಕಾರಿನ ಗಾಜು ಹೊಡೆದಿದ್ದರಿಂದ ರೂ.4,750-00 ನಷ್ಟ ಆಗಿದೆ ಎಂದು ಪೊಲೀಸರಿಗೆ ತಿಳಿಸಿದ್ದರು. ನಿ.ಪಿ.4 ಛಾಯಚಿತ್ರದಲ್ಲಿ ಕಂಡು ಬರುವ ಕಾರು ಆ ದಿನ ಹಾನಿಗೆ ಒಳಗಾಗಿತ್ತು. ಕಾರಿನ ಗಾಜು ಮತ್ತು ಕಲ್ಲನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿತನ ಪರವಾಗಿ

3. ಆ ದಿನ ದಿಃ 08.10.2024 ರ ದಿನಾಂಕ ಆಗಿತ್ತು. ನಮ್ಮ ಊರಿನಲ್ಲಿ ದುರ್ಗಾ ಪೂಜೆ ಸಂಜೆ 6.00 ರಿಂದ 8.30 ರವರೆಗೆ ನಡೆಯುತ್ತದೆ. ಚಾಸಾ.1 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.1 ರವರು ಒಂದೇ ಜನಾಂಗಗಕ್ಕೆ ಸೇರಿದವರು ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ದುರ್ಗಾದೇವಿ ದೇವಸ್ಥಾನ 200 ಅಡಿ ಅಂತರದಲ್ಲಿ ಇದೆ. ಉಮೇಶ್ ರವರ ಮನೆಯಿಂದ ದುರ್ಗಾದೇವಿ ದೇವಸ್ಥಾನ 100 ಅಡಿ ಅಂತರದಲ್ಲಿ ಇದೆ. ನಾನು ಆ ದಿನ ಸಂಜೆ 7.00 ಗಂಟೆಗೆ ದೇವಸ್ಥಾನಕ್ಕೆ ಹೋಗಿದ್ದೆ. ನಾನು ಆ ದಿನ ದ್ವಿಚಕ್ರ ವಾಹನದಲ್ಲಿ ದೇವಸ್ಥಾನಕ್ಕೆ ಹೋಗಿದ್ದೆ. ನಾನು ಆರೋಪಿಯನ್ನು ನೋಡಿದಾಗ 8.15 ರ ಸಮಯ ಆಗಿತ್ತು. ಪೂಜೆ ಮುಗಿಸಿ ನಾವು ಬಂದಾಗ 8.15 ರ ಸಮಯ ಆಗಿತ್ತು. ಕಾರಿನ ಗಾಜನ್ನು ಹೊಡೆದು ಹಾಕಿದಾಗ 8.15 ರ ಸಮಯ ಆಗಿತ್ತು. ಆರೋಪಿ ತನ್ನ ಕೈಯಿಂದ ನೇರವಾಗಿ ಕಾರಿನ ಮೇಲೆ ಕಲ್ಲನ್ನು ಹಾಕಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆರೋಪಿ ಕಲ್ಲನ್ನು ಎತ್ತಿ ಕಾರಿನ ಮೇಲೆ ಹಾಕಿದಾಗ ನಾನು, ಚಾಸಾ.2, ಚಾಸಾ.4 ಮತ್ತು 5 ಇದ್ದೆವು. 25 ರಿಂದ 50 ಅಡಿ ಅಂತರದಿಂದ ಆರೋಪಿ ಕಾರಿನ ಮೇಲೆ ಕಲ್ಲನ್ನು ಹಾಕಿದ್ದನ್ನು ನಾವು ನೋಡಿದ್ದೆವು.

4. ಆ ಸಮಯದಲ್ಲಿಯೇ ಚಾಸಾ.1 ರವರಿಗೆ ಆ ವಿಚಾರವನ್ನು ತಿಳಿಸಲು ದೇವಸ್ಥಾನದಲ್ಲಿ ಊಟ ಹಾಕುತ್ತಿದ್ದರಿಂದ ಹೇಳಲಿಲ್ಲ. ಚಾಸಾ.1 ರವರು ಬಂದು ನೋಡಿದ ಬಳಿಕ ನಾವು ವಿಚಾರವನ್ನು ಅವರಿಗೆ ತಿಳಿಸಿದ್ದೆವು. ನಾವು ವಿಚಾರವನ್ನು ಚಾಸಾ.1 ರವರಿಗೆ ತಿಳಿಸಿದಾಗ ಕಲ್ಲು ಕಾರಿನ ಮೇಲೆ ಇತ್ತು. ಕಾರಿನ

ಬಲಭಾಗದಲ್ಲಿ ಹೊಡೆದಿತ್ತು, ಸಂಪೂರ್ಣ ಗಾಜಿಗೆ ಹಾನಿಯಾಗಿತ್ತು. ಕಾರಿನ ಗಾಜನ್ನು ಹೊರತು ಪಡಿಸಿ ಬೇರೆ ಯಾವುದೇ ಹಾನಿ ಕಾರಿಗೆ ಆಗಿರಲಿಲ್ಲ. ನಿ.ಪಿ.4 ಛಾಯಚಿತ್ರವನ್ನು ಯಾರು ತೆಗೆದಿದ್ದರು ಎಂದು ಸುಮಾರು ಜನ ಇದ್ದ ಕಾರಣ ನನಗೆ ಗೊತ್ತಿಲ್ಲ. ನಿ.ಪಿ.4 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನಿಪಿ.4 ಛಾಯಚಿತ್ರದಲ್ಲಿ ಕಲ್ಲು ಕಾಣುವುದಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಸುಮಾರು ಜನ ಬಂದು ನೋಡಿದಾಗ ಕಲ್ಲು ಕೆಳಗೆ ಬಿದಿತ್ತು ಎಂದು ನುಡಿಯುತ್ತಾರೆ. ಸ್ಥಳದ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ. ಚಾಸಾ.1 ಅದೇ ದಿನ ಪೊಲೀಸರಿಗೆ ಕರೆ ಮಾಡಿ ದೂರು ನೀಡಿದ್ದರು. ಪೊಲೀಸರು ಮರು ದಿನ ಬೆಳಿಗ್ಗೆ ಸ್ಥಳಕ್ಕೆ ಬಂದಿದ್ದರು. ಚಾಸಾ.1 ರವರಿಗೆ ನಿಮ್ಮ ಕಾರಿನ ಮೇಲೆ ಬಿದ್ದ ಕಲ್ಲು ಇದೇ ಎಂದು ನಾನು ತೋರಿಸಲಿಲ್ಲ. ಆರೋಪಿ ಇದೇ ಕಲ್ಲನ್ನು ಕಾರಿನ ಮೇಲೆ ಎತ್ತಿ ಹಾಕಿದ್ದ ಎಂದು ಚಾಸಾ.1 ರವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಚಾಸಾ.1 ರವರೇ ನೋಡಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಕಲ್ಲು ಆ ಕಲ್ಲು ಅಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ಹೇಳಿಕೆಯಲ್ಲಿ ವಿನೋದ್ ರವರ ಕಾರಿನ ಬಣ್ಣ ಹೇಳಿದ್ದೇನೆ ಎಂದರೆ ಸರಿ. ಕಾರು ನಿಲ್ಲಿಸಿದ ಸ್ಥಳದಲ್ಲಿ ಸೀಬೆ ಮರ ಇತ್ತು.

5. ಅಕ್ಟೋಬರ್ 8 ರಂದು ಮಳೆ ಇತ್ತು ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ.1 ರವರು ಅನೇಕ ಬಾರಿ ಗಲಾಟೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ನನಗೆ ಸುಮಾರು ವರ್ಷಗಳಿಂದ ಪರಿಚಯ. ನಾನು ನೋಡಿದಾಗ ಆರೋಪಿಯ ಕೈಯಲ್ಲಿ ಬ್ಯಾಗು ಇತರೆ ವಸ್ತುಗಳು ಇರಲಿಲ್ಲ. ನೂರಾರು ಜನ ಸೇರಿದ ಸ್ಥಳದಲ್ಲಿ ಶಬ್ದ ಬಂದರೆ ಅಲ್ಲಿ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿಯಲ್ಲ.

6. ಪೊಲೀಸರು ಮಹಜರ್ ಗೆ ನನ್ನನ್ನು ಕರೆದಿಲ್ಲ, ಮಹಜರ್ ಗೆ ನಾನು ಹೋಗಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿಲ್ಲ. ಕಾರಿನ ಗಾಜಿನ ಬೆಲೆಯನ್ನು ಚಾಸಾ.1 ರವರು ನನಗೆ ತಿಳಿಸಿದ್ದರು ಎಂದರೆ ಸರಿ. ನನಗೆ ಕಾರಿನ ಗಾಜಿನ ನಿಖರವಾದ ಬೆಲೆ ತಿಳಿದಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದ

ಸ್ಥಳದಲ್ಲಿ ಇದಿದ್ದರೆ ತಕ್ಷಣ ಚಾಸಾ.1 ರವರಿಗೆ ವಿಚಾರವನ್ನು ತಿಳಿಸುತ್ತಿದ್ದೆ, ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ನಾನು ನೀಡಿದೆ ಎಂದು ಹೇಳುವ ಹೇಳಿಕೆ ಸುಳ್ಳು ಎಂದರೆ ಸರಿಯಲ್ಲ. ಚಾಸಾ.1 ಮತ್ತು ಆರೋಪಿಯ ನಡುವೆ ಇದ್ದ ಗಲಾಟೆ ವಿಚಾರವಾಗಿ ದ್ವೇಷದಿಂದ ಆರೋಪಿಯ ಮೇಲೆ ಈ ದೂರನ್ನು ದಾಖಲಿಸಿದ್ದಾರೆ, ನಾವುಗಳು ಚಾಸಾ.1 ರವರಿಗೆ ಬೆಂಬಲಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ